ಶ್ರೀ ಜಿ.ಟಿ.ದೇವೇಗೌಡ: enquiry ನಡೆದು ಸಾಬೀತಾಗಲಿ. ಕೇಸ್ ಹಾಕಿ. ನಾಲ್ಕೈದು ವರ್ಷಗಳಿಂದ ಗೌರವದಿಂದ ಕೆಲಸ ಮಾಡಿದ್ದಾರೆ. ಇಡೀ ದೇಶದಲ್ಲಿ ಒಳ್ಳೆಯ ಯೂನಿವರ್ಸಿಟಿ ಎಂದು certificate ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು: ಬೇರೆ ವಿಚಾರಗಳನ್ನು ತೆಗೆದುಕೊಳ್ಳುವುದೋ ಬೇಡ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು ತನಿಖೆ ಮಾಡಿ ಎಂದು ಹೇಳಿದ್ದೇವೆ.

ಅಧ್ಯಕ್ಷರು: ದೇವೇಗೌಡರೇ ಕುಳಿತುಕೊಳ್ಳಿ. ನೀವು being a member of Cabinet ನೀವು ಕೂಗಾಡಿದರೆ ನಾನು ಸಹಿಸುವುದಿಲ್ಲ. ಎಲ್ಲದಕ್ಕೂ ಒಂದು ಮಿತಿ ಇದೆ. ಮಹಾದೇವಪ್ಪನವರೇ, ಕುಳಿತುಕೊಳ್ಳಿ. ಕೊನೇ ದಿವಸ ನಾನು ಹೊರಗಡೆ ಕಳುಹಿಸಿಬಿಡುತ್ತೇನೆ. ಸರಿ ಇರುವುದಿಲ್ಲ. ಇಲ್ಲಿಯವರೆಗೆ ನಾನು ಒಬ್ಬರಿಗೂ ಹೊರಗಡೆ ಕಳುಹಿಸಿಲ್ಲ. ಇವತ್ತು ಕಳುಹಿಸಿ ಬಿಡುತ್ತೇನೆ. ಮೊದಲು ನೀವು ಕುಳಿತುಕೊಳ್ಳಿ. ಎಲ್ಲಾ ನೀವೇ ಚಾಂಪಿಯನ್ಸ್. ನೀವು ಮೊದಲು ಕುಳಿತುಕೊಳ್ಳಿ. ಸರ್ಕಾರ ಉತ್ತರ ಕೊಟ್ಟಿದೆ, ಉತ್ತರ ಹೇಳಿರುವುದರಿಂದ ಬೇರೆ ವಿಚಾರಕ್ಕೆ ಹೋಗೋಣ. ಈಗ ಅರ್ಧಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳೋಣ. ಕೊನೆಯಲ್ಲಿ ಉತ್ತರ ಕೊಡಿಸುತ್ತೇನೆ. ಕೊನೆಯಲ್ಲಿ ಉತ್ತರ ಕೊಟ್ಟರೆ ಅವರು ಒಂದೆರಡು ಗಂಟೆ ಸದನದಲ್ಲಿ ಇದ್ದ ಹಾಗಾಗುತ್ತದೆ.

9.ಅರ್ಧಗಂಟೆ ಕಾಲಾವಧಿ ಚರ್ಚೆ

ವಿಷಯ: ತೆಂಗಿನ ಮರಗಳಿಗೆ ತಗುಲಿರುವ ನುಸಿ ಪೀಡೆ ಕುರಿತು.

ಶ್ರೀ ವಾಟಾಳ್ ನಾಗರಾಜ್: (ಚಾಮರಾಜ ನಗರ): ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ತೆಂಗಿಗೆ ನುಸಿ ಪೀಡೆ ತಗುಲಿರುವ ಬಗ್ಗೆ ನಾನು ಪ್ರಶ್ನೆ ಕಳುಹಿಸಿದ್ದೆ, ಅದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಆಗಬೇಕೆಂದು ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ತಾವು ಕಾಲಾವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ಅಭಿನಂದಿಸುತ್ತೇನೆ. ಈ ನುಸಿ ಪೀಡೆಗಿಂತ ಹೆಚ್ಚಾಗಿ ಇಲ್ಲಿ ನಡೆದಂಥಹ ವಾಗ್ವಾದಗಳನ್ನು ನೋಡಿದಾಗ ಯಾವ ಕಾಲದಲ್ಲಿ ಈ ಸಭೆ ಆರಂಭವಾಯಿತೋ ನನಗಂತೂ ಗೊತ್ತಿಲ್ಲ. 9.45 ಗಂಟೆಗೆ ಸದನ ಪ್ರಾರಂಭ ಮಾಡುವ ಬಗ್ಗೆ ತಮಗೆ ಯಾರಾದರೂ ಕೇಳಿದರೋ ಇಲ್ಲವೋ ಗೊತ್ತಿಲ್ಲ. ಸದನವನ್ನು ಯಾವ ಸಮಯಕ್ಕೆ ಕರೆಯೋಣವೆಂದು ಯಾರು ಹೇಳಿದರೋ ಗೊತ್ತಿಲ್ಲ.

ಅಧ್ಯಕ್ಷರು: ರಾಜ್ಯಪಾಲರಿಂದ ಪತ್ರ ಬಂದಿತು ನಾವು ಸದನ ಕರೆದವು. ನಾಲ್ಕೈದು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ನುಸಿ ಪೀಡೆ ವಿಷಯ ಬಹಳ ಗಂಭೀರವಾಗಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ರಾಜ್ಯಪಾಲರು ಪತ್ರ ಕಳುಹಿಸಿದ ಮೇರೆಗೆ ಸಭೆ ಕರೆದಿದ್ದೇವೆಂದು ಹೇಳಿದಿರಿ ಆಯಿತು. ನನ್ನದೇನೂ ಅಭ್ಯಂತರವಿಲ್ಲ, ಸಂವಿಧಾನದ ಪ್ರಕಾರ ಅವರು ಕಳುಹಿಸಲೇಬೇಕು. ಆ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ. ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಅವರು ನನಗೆ ಉತ್ತರ ಕೊಟ್ಟಿರುವುದರಲ್ಲಿ ರಾಜ್ಯದಲ್ಲಿ 1.13 ಲಕ್ಷ ಹೇಕ್ಟೇರ್ ಪ್ರದೇಶದಲ್ಲಿ ತೆಂಗಿಗೆ ನುಸಿ ಪೀಡೆ ರೋಗ ತಗುಲಿದೆ. ಎಂದು ಉತ್ತರ ಕೊಟ್ಟಿದ್ದಾರೆ. ನನಗನ್ನಿಸುತ್ತದೆ, ನುಸಿ ಪೀಡೆರೋಗದ ಬಗ್ಗೆ ಇವರಿಗೆ ಸಿಕ್ಕಿರತಕ್ಕಂತಹ ಅಂಕಿಅಂಶವನ್ನು ನಾನು ಸಾರಾಸಗಟಾಗಿ ತಳ್ಳಿ ಹಾಕುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಸುಮಾರು 10 ಲಕ್ಷದಷ್ಟು ತೆಂಗಿನ ಮರಗಳಿಗೆ ನುಸಿ ಪೀಡೆ ರೋಗ ತಗುಲಿದೆ. ಆ ಪೀಡೆಯನ್ನು ಹೋಗಲಾಡಿಸದೆ ಸತ್ತಿರತಕ್ಕಂತಹ ಮರಗಳು ಸುಮಾರು 3 ಲಕ್ಷದಿಂದ 4ಲಕ್ಷ ಮರಗಳಿವೆ. ಒಂದು ಕಾಲದಲ್ಲಿ 'ಆರು ವರ್ಷ ನನ್ನನ್ನು ಸಾಕು, 100 ವರ್ಷ ನಿನಗೆ ಸಾಕುತ್ತೇನೆಂದು' ಹೇಳಿ ಈ ತೆಂಗಿನ ಬಗ್ಗೆ ಗಾದೆ ಇರುವುದು ತಮಗೂ ಗೊತ್ತು. ನನಗೂ ಗೊತ್ತು. ಆದರೆ ಇವತ್ತು ಆ ಪರಿಸ್ಥಿತಿ ಇಲ್ಲ. ಆರು ವರ್ಷಗಳಾದ ತಕ್ಷಣ ಅದು ಫಲ ಬಿಡುವುದಕ್ಕೆ ಪ್ರಾರಂಭ ಮಾಡಿದ ತಕ್ಷಣ ರೋಗ ತಗುಲುತ್ತಿದೆ. ನುಸಿ ಪೀಡೆ ಜೊತೆಗೆ ರೆಕ್ಕೆ ಒಣಗುವಂತಹ ರೋಗ ಕೂಡ ಒಂದು ಬಂದಿದೆ. ಅದು ಏನೆಂದರೆ, ಇಡೀ ಚಿಗುರಿನವರೆಗೆ ಒಣಗಿ ಮರವೇ ಸಂಪೂರ್ಣವಾಗಿ ಬೋಳಾಗಿ ಹೋಗುತ್ತದೆ. ಇದು ನಮ್ಮ ತೋಟದಲ್ಲಿಯೂ ಆಗಿದೆ. ಈಗ ಅದಕ್ಕೆ ಇವರೇನು ಮಾಡುತ್ತಿದ್ದಾರೆ, ಯಾವ ರೀತಿ ಆ ರೆಕ್ಕೆ ಒಣಗುತ್ತದೆ ಎಂದು ನೋಡಿದರೆ, ಒಣಗಿರತಕ್ಕಂತಹ ಪ್ರತಿ ರೆಕ್ಕೆಗೂ ಮಣ್ಣು ತುಂಬಿಕೊಂಡಿರುತ್ತದೆ. ಆ ಮಣ್ಣು ಹೇಗೆ ಅಲ್ಲಿಗೆ ಕ್ರಿಮಿ ಕೀಟಗಳು ತೆಗೆದುಕೊಂಡು ಹೋಗಿ ಸೇರಿಸುತ್ತವೆ ಎಂಬ ಪ್ರಶ್ನೆಗೆ ಬೇರೆ. ಅದು ಹಾಗೆಯೇ ಗರಿಗಳೆಲ್ಲಾ ಸತ್ತು ಸತ್ತು ಒಣಗಿ ಹೋಗುತ್ತವೆ. ಕೊನೆಗೆ ಬಿಡತಕ್ಕಂತಹ ಫಲ ಅದು ಎಷ್ಟು ಸಣ್ಣದಾಗಿರುತ್ತದೆ ಎಂದರೆ, ಬಹಳ ಸಣ್ಣದಾದ ಫಲ ಬರುತ್ತದೆ. ಇದರಿಂದ ಪ್ರತಿ ಒಂದು ಎಕರೆ ಪ್ರದೇಶದಲ್ಲಿ ಬೆಳೆಯತಕ್ಕಂತಹ ರೈತನಿಗೆ ಅಪಾರವಾದ ನಷ್ಟವಾಗುತ್ತಿದೆ. ಜೊತೆಗೆ 20, 30, ಮತ್ತು 40 ವರ್ಷಗಳ ಕಾಲ ಬೆಳೆದಂತಹ ಬೆಳೆಗಳು ಸಂಪೂರ್ಣ ನಾಶವಾಗಿವೆ. ಅದನ್ನು ಬೆಳೆಯಬೇಕಾದರೆ ಅವನು ಸಾಲ ತೆಗೆದುಕೊಂಡಿರುತ್ತಾನೆ. ತನ್ನ ಕೈಯಿಂದ ಖರ್ಚು ಮಾಡಿರುತ್ತಾನೆ,

ವ್ಯವಸಾಯ ಮಾಡಿರುತ್ತಾನೆ, ಅದೆಲ್ಲವೂ ಸಂಪೂರ್ಣವಾಗಿ ನಾಶವಾಗುತ್ತದೆ. ಇದರ ಬಗ್ಗೆ ಮಾನ್ಯ ತೋಟಗಾರಿಕಾ ಇಲಾಖಾ ಸಚಿವರನ್ನು ಕಳಕಳಿಯಿಂದ ಮನವಿ ಮಾಡುತ್ತೇನೆ, ನೀವು ಈ ತೆಂಗು ಬೆಳೆಯುವಂತಹ ರೈತರನ್ನು ಕರೆದು ಅವರ ಜೊತೆಯಲ್ಲಿ ಏನಾದರೂ ಮಾತುಕತೆ ಮಾಡಿದ್ದೀರಾ? ತೆಂಗು ಬೆಳೆಗೆ ಆಗತಕ್ಕಂತಹ ಪರಿಸ್ಥಿತಿಯನ್ನು ನಿಲ್ಲಿಸುವುದಕ್ಕೆ ಇವರು ಒಂದು ಚಿಟ್ಟೆಯನ್ನು ಕಂಡುಹಿಡಿದಿದ್ದಾರೆ. ಈ ಚಿಟ್ಟೆಯನ್ನು ಮರಕ್ಕೆ ಬಿಡುವುದು. ಈ ಚಿಟ್ಟೆ ಬಿಟ್ಟರೆ ಕ್ರಿಮಿಗಳನ್ನು ಚಿಟ್ಟೆಗಳು ತಿನ್ನುತ್ತವೆ ಎಂದು ಚಿಟ್ಟೆಗಳನ್ನು ಕಂಡುಹಿಡಿದಿದ್ದಾರೆ. ನಾನು ಸ್ವಲ್ಪ ಹೆಚ್ಚು ಕಡಿಮೆ ನಿಮಗೆ ಹೇಳುತ್ತೇನೆ, ಎರಡು ತಿಂಗಳುಗಳಿಂದ ಸುಮಾರು 10,000 ಚಿಟ್ಟೆಗಳನ್ನು ನಾನು ಮೈಸೂರಿನಂದ ತೆಗೆದುಕೊಂಡು ಹೋಗಿ ಪ್ರತಿ ಮರಗಳಿಗೂ ಚಿಟ್ಟೆಗಳನ್ನು ಬಿಟ್ಟಿದ್ದೇನೆ. ಆ ಚಿಟ್ಟೆಯನ್ನು ಬಿಡುವಾಗ ಜೇನು ತುಪಪ್ಪನ್ನು ಮರಕ್ಕೆ ಹಾಕಬೇಕು. ಚಿಟ್ಟೆಗಳ ಡಬ್ಬವನ್ನು ತೆಗೆದರೆ ಆ ಚಿಟ್ಟೆಗಳು ಹಾರಿ ಮರದ ಮೇಲೆ ಕುಳಿತುಕೊಂಡು ಆ ಕೀಟಗಳನ್ನು ತಿನ್ನುತ್ತವೆ. ಎಂದು ಇದೆ. ಆ ಪ್ರಯೋಗ ಅಷ್ಟು ಸಮಂಜಸವಾಗಿಲ್ಲವೆಂದು ನನಗನ್ನಿಸುತ್ತದೆ. ಇದು ಒಂದು. ಎರಡನೆಯದಾಗಿ ಕನಷ್ಟ ನೀವು ಈ ರೋಗ ಬರದ ರೀತಿ ನೋಡುವುದಕ್ಕೆ ಹಿಂದೆ ಏನಿತ್ತು, ಈ ಬುಡಕ್ಕೆ ಆ ಬೇರಿಗೆ ಒಂದು ಇಂಜೆಕ್ಷನ್ ಮಾಡುತ್ತಿದ್ದರು. ಅದರಿಂದಲೂ ಹೋಗುತ್ತಿಲ್ಲ. ಬೇರೆ ಬೇರೆ ಪೆಸ್ಟಿಸೈಡ್ಸ್ ಹಾಕಿದರೂ ಕೂಡ ಅದರಿಂದಲೂ ಹೋಗುತ್ತಿಲ್ಲ. ಇಡೀ ರಾಜ್ಯದಲ್ಲಿ ತೆಂಗಿನ ಕುಲವೇ ನಾಶವಾಗುತ್ತಿದೆ. ಇದರಿಂದಾಗಿ ಸಿಗುತ್ತಿರುವ ಕಾಯಿಗೆ ರೇಟ್ ಜಾಸ್ತಿಯಾಗಿದೆ. ಕೊಬ್ಬರಿಯಂತೂ ಈಗ ಸರಿಯಾಗಿ ಬರುತ್ತಿಲ್ಲ. ಇದರಿಂದಾಗಿ ಕೊಬ್ಬರಿ ಮಾರತಕ್ಕಂಥ ವರ್ತಕರು ಕೂಡ ಈಗ ತೊಂದರೆಗೆ ಸಿಲುಕಿದ್ದಾರೆ. ಎಳನೀರು ಮಾರತಕ್ಕಂಥ ವ್ಯಾಪಾರಿಗಳು ತೊಂದರೆಗೆ ಸಿಲುಕಿದ್ದಾರೆ. ಇವೆಲ್ಲವೂ ಸಂಪೂರ್ಣವಾಗಿ ನಾಶವಾಗಿ ಈಗ ಇಂಥ ಕಷ್ಟಕರ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಕಳಕಳಿಯ ಮನವಿ ಮಾಡುವುದೇನೆಂದರೆ, ಈ ನುಸಿಪೀಡೆಯನ್ನು ಸಮಗ್ರವಾಗಿ ಸಂಪೂರ್ಣವಾಗಿ ಹೋಗಲಾಡಿಸುವುದಕ್ಕೆ ಮೊದಲು ಕ್ರಮ ತೆಗೆದುಕೊಳ್ಳಬೇಕು. ಈಗ ನೀವೇನೋ ವಿಶ್ವವಿದ್ಯಾಲಯ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಅದಕ್ಕಿಂತ ಮೊದಲು ಈ ನುಸಿಪೀಡೆಯನ್ನು ಹೋಗಿಸಿ. ನುಸಿಪೀಡೆಯನ್ನು ಹೋಗಲಾಡಿಸುವುದಕ್ಕೆ ನಿಮಗೆ ತಜ್ಞರ ಸಮಿತಿ ಏನು ವರದಿ ಕೊಟ್ಟಿದ್ದಾರೆ? ಈಗ ಯಾವ ಪರಿಸ್ಥಿತಿ ಇದೆ? ಇವ್ಯಾವ ಕ್ರಮಗಳೂ ಇನ್ನೂ ಆಗಿಲ್ಲ. ಆದುದರಿಂದ ನಾನು ಹೇಳುತ್ತಿದ್ದೇನೆ, ಈ ನುಸಿಪೀಡೆಯನ್ನು ಸಂಪೂರ್ಣವಾಗಿ ಹೋಗಲಾಡಿಸುವುದಕ್ಕೆ ಪ್ರಾಮಾಣಿಕವಾಗಿ

ಪ್ರಯತ್ನ ನಡೆದಿಲ್ಲ. ಸುಮ್ಮನೆ ಅಧಿಕಾರಿಗಳು ಇದ್ದಾರೆ. ಇವರು ನಿಮಗೆ ಸಲಹೆ ಕೊಡುತ್ತಾರೆ. ಆದರೆ ಏನೂ ಆಗೋಲ್ಲ. ಇದರಿಂದಾಗಿ ತೆಂಗಿನ ಬೆಳೆಯ ರೈತರುಗಳು ಸಂಪೂರ್ಣವಾಗಿ ನಷ್ಟವನ್ನು ಅನುಭವಿಸುತ್ತಿದ್ದಾರೆ. ಆದುದರಿಂದ ಪ್ರತಿ ತೆಂಗಿನ ಮರಕ್ಕೆ ಬೆಳೆಯುತ್ತಿರಬೇಕಾದರೆ ನಷ್ಟವಾದರೆ ಇಷ್ಟು, 20 ವರ್ಷ ಮರವಾಗಿದ್ದರೆ ಇಷ್ಟು, 30 ವರ್ಷದ ಮರಕ್ಕೆ ಇಷ್ಟು, 40 ವರ್ಷ ಬೆಳೆದಿದ್ದರೆ, ಇಷ್ಟು ಎಂದು ಹೀಗೆ ಮರದ ವಯಸ್ಸಿನ ಮೇಲೆ ನೀವು ರೈತರಿಗೆ ಸಂಪೂರ್ಣವಾಗಿ ಸಹಾಯಧನವನ್ನು ಮಾಡತಕ್ಕಂಥದ್ದು ಆಗಬೇಕು. ಈ ಬಗ್ಗೆ ಸರ್ಕಾರವೇ ಒಂದು ಮರಕ್ಕೆ ಇಷ್ಟು ಸಹಾಯ ಕೊಡುತ್ತದೆ ಎಂಬುದನ್ನಾದರೂ ನೀವು ಹೇಳಬೇಕಲ್ಲವೇ? ನೀವೇನು ಹೇಳದಿರುವುದರಿಂದ ಹಿಂದೆ ಈ ತೆಂಗಿನ ತೋಟದಲ್ಲಿ ಶ್ರೀಮಂತರಾಗಿದ್ದವರು, ಧನಕರಾಗಿದ್ದವರು, ದೊಡ್ಡ ದೊಡ್ಡ ರೈತರುಗಳೆಲ್ಲರೂ ಇಂದು ನೆಲಕಚ್ಚಿದ್ದಾರೆ. ಇದು ಇಂದಿನ ಪರಿಸ್ಥಿತಿಯಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ನಾನು ಕಂಡಂತೆ ನೂರಕ್ಕೆ ಸುಮಾರು ಎಪ್ಪತ್ತು ಭಾಗ ತೆಂಗು ಸಂಪೂರ್ಣವಾಗಿ ನಾಶವಾಗಿದೆ. ಇದರಂತೆಯೇ ಮೈಸೂರು, ತುಮಕೂರು ಮತ್ತು ತಿಪಟೂರಿನಲ್ಲಿ ಎಲ್ಲ ಕಡೆಯಲ್ಲಿಯೂ ತೆಂಗು ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಮೈಸೂರು ಜಿಲ್ಲೆಯ ಹದಿನಾರು ಎಂಬ ಗ್ರಾಮದಲ್ಲಿ ಎಲ್ಲಾ ಕಡೆ ಹಸಿರು ಕಾಣುವ ಬದಲು ಮಣ್ಣಿನಿಂದ ಕೂಡಿದಂಥ ಒಣಗಿದ ಗರಿಗಳೇ ಕಾಣುತ್ತವೆ. ಆದುದರಿಂದ ಈ ನುಸಿಪೀಡೆಯನ್ನು ಇದುವರೆಗೂ ಸಂಪೂರ್ಣವಾಗಿ ಯಾರೂ ಕೂಡ ಹೋಗಲಾಡಿಸಿಲ್ಲ. ಇದೇ ಪರಿಸ್ಥಿತಿ ಸಮಗ್ರವಾಗಿ ಎಲ್ಲಾ ಕಡೆಗಳಲ್ಲಿಯೂ ನಿರ್ಮಾಣವಾಗಿದೆ. ಇದೆಲ್ಲವನ್ನೂ ಹೇಳಿದ ತಕ್ಷಣ ನೀವು ಏನೋ ಒಂದು ಉತ್ತರ ಕೊಡುವುದಕ್ಕೆ ತಯಾರಾದರೆ ಸಾಲದು. ನುಸಿ ಪೀಡೆ ಹೋಗಲಾಡಿಸಲು ಪ್ರಾಮಾಣಿಕ ಚಿಂತನೆ ಮಾಡಬೇಕು. ಈ ನಟ್ಟಿನಲ್ಲಿ ಈಗಾಗಲೇ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ನೀವು ಕೊಟ್ಟಿರುವ ಅಂಕಿ ಅಂಶ ಸರಿಯಾಗಿಲ್ಲ. ಮತ್ತೆ ನೀವು ಸರಿಯಾದ ಅಂಕಿ ಅಂಶವನ್ನು ತರಿಸಿಕೊಳ್ಳಿ. ಇದಕ್ಕಾಗಿ ನೀವು ತಜ್ಞರ ಸಮಿತಿಯನ್ನು ನೇಮಕ ಮಾಡಿ. ಈ ಸಮಿತಿ ನೇಮಕ ಮಾಡಿ, ಪ್ರತಿ ತಾಲ್ಲೂಕು, ಗ್ರಾಮ, ಹೋಬಳಿ, ಜಿಲ್ಲೆ, ಹೀಗೆ ಎಲ್ಲ ಕಡೆಗಳಿಂದ ಸಮಗ್ರ ಅಂಕಿ ಅಂಶಗಳನ್ನು ತರಿಸಿ. ಎಷ್ಟು ನಷ್ಟವಾಗಿರತಕ್ಕಂಥದ್ದು, ನಾಶ ಆಗಿರತಕ್ಕಂಥದ್ದು ಎಷ್ಟು, ಈಗ ಅರ್ಧಂಬರ್ಧ ಹಾಳಾಗಿರುವ ಮರಗಳನ್ನು ಉಳಿಸುವುದಕ್ಕೆ ಸಾಧ್ಯವಾಗುವಂಥದ್ದು ಎಷ್ಟು, ರೋಗ ಹೋಗಲಾಡಿಸುವುದಕ್ಕೆ ಹೊಸ ವಿಧಾನ ಏನು ಎಂಬ ಬಗ್ಗೆ ಹೇಳಬೇಕು. ಈಗ ನೀವೇನು ಚಿಟ್ಟೆ ವಿಧಾನ ಹೇಳಿದ್ದೀರಿ. ಇದು ಸರಿಯಿಲ್ಲ. ನುಸಿಪೀಡೆ

ಹೋಗಲಾಡಿಸಲು ನೀವು ಚಿಟ್ಟೆ ತೆಗೆದುಕೊಂಡು ಹೋಗಿ ಎಂದು ನನಗೇ ಹೇಳಿದರು. ಇದದಿಂದ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಇಂದು ಇಡೀ ರಾಜ್ಯದ ರೈತರು ತೊಂದರೆಗೆ ಒಳಗಾಗಿದ್ದಾರೆ. ಆದುದರಿಂದ ನಾನು ತಮಗೆ ಹೇಳುತ್ತಿದ್ದೇನೆ, ಈ ನುಸಿ ಪೀಡೆಯನ್ನು ಸಂಪೂರ್ಣವಾಗಿ ಹೋಗಲಾಡಿಸುವುದಕ್ಕೆ ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಸುಮ್ಮನೆ ಏನೋ ಹೇಳಬೇಡಿ. ಇದನ್ನು ನಿಮ್ಮ ಕೈಯಲ್ಲಿ ಸಂಪೂರ್ಣವಾಗಿ ಹೋಗಲಾಡಿಸುವುದಕ್ಕೆ ಸಾಧ್ಯವಿದ್ದರೆ ಹೋಗಲಾಡಿಸುತ್ತೇವೆ ಎಂದು ಹೇಳಿ. ಇಲ್ಲದಿದ್ದರೆ ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಹೇಳಿ. ಅದನ್ನು ಬಿಟ್ಟು ಸುಮ್ಮನೆ ನಾವು ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆ, ಚಿಟ್ಟೆ ಬಿಟ್ಟಿದ್ದೇವೆ ಎಂದು ಈ ರೀತಿಯ ಕಥೆಗಳನ್ನು ಹೇಳಬೇಡಿ. ಪ್ರಾಮಾಣಿಕವಾಗಿ ಇರುವುದನ್ನು ಸರ್ಕಾರ ಒಪ್ಪಿಕೊಳ್ಳಬೇಕು. ನಿಮ್ಮ ಕೈಲಾಗುತ್ತದೋ ಅಥವಾ ಇಲ್ಲವೋ ಎಂಬ ಬಗ್ಗೆ ಮಾತ್ರ ತಾವು ಹೇಳಿ. ನಾನು ನಿಮಗೆ ಹೇಳುವುದೇನೆಂದರೆ, ಮೊದಲು ತೆಂಗಿನ ರೈತರುಗಳನ್ನು ಉಳಿಸತಕ್ಕಂಥ ವಿಧಾನ ಯಾವುದು? ನುಸಿಪೀಡೆಯಿಂದ ನಷ್ಟವಾಗಿರತಕ್ಕಂಥ ಒಟ್ಟು ಪ್ರದೇಶಗಳೂ ಎಷ್ಟು? ಅಂಥವರಿಗೆ ಎಷ್ಟು ಹಣವನ್ನು ಕೊಡಬೇಕು, ಅದನ್ನು ಯಾವ ರೀತಿ ಕೊಡಬೇಕು ಎಂಬುದರ ಬಗ್ಗೆ ತಾವು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಸರಿಯಾದ ರೀತಿಯಲ್ಲಿ ನರ್ಧಾರ ಮಾಡುವ ಬಗ್ಗೆ ಪ್ರಾಮಾಣಿಕವಾದಂಥ ಚಿಂತನೆಯನ್ನು ನೀವು ಮಾಡಬೇಕು. ಇವತ್ತಿನ ಪರಿಸ್ಥಿತಿಯಲ್ಲಿ ಇಡೀ ರಾಜ್ಯದಲ್ಲಿ ತೆಂಗು ಬೆಳೆಯ ರೈತರುಗಳು ನೆಲ ಕಚ್ಚಿದ್ದಾರೆ ಎನ್ನುವಂಥ ಮಾತನ್ನು ಹೇಳಿ ಈ ಬಗ್ಗೆ ಸರ್ಕಾರ ಪರಿಣಾಮಕಾರಿಯಾದಂಥ ಉತ್ತರವನ್ನು ಕೊಡುತ್ತದೆಂದು ನಾನು ನಿರೀಕ್ಷೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅಲಂಗೂರು ಆರ್. ಶ್ರೀನಿವಾಸ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಯಾವ ಔಷಧಿ ಎಂದು ಹೇಳುವುದಕ್ಕಿಂತ ಮುಖ್ಯವಾಗಿ ನಾನು ಒಬ್ಬ ರೈತನಾಗಿ ಹೇಳುವುದೇನೆಂದರೆ, ಬೇವಿನ ಹಿಂಡಿ, ಬೇವಿನ ಎಣ್ಣೆ ಹಾಕಿ ಒಳ್ಳೆಯ ಗೊಬ್ಬರವನ್ನು ಹಾಕಿದರೆ ಕ್ರಮೇಣ ನುಸಿ ಪೀಡೆ ಕಡಿಮೆಯಾಗುತ್ತದೆ. ನನ್ನ ತೋಟದಲ್ಲಿ ನಾನು ಯಾವ ಔಷಧಿಯನ್ನೂ ಕೂಡ ತೆಂಗಿನ ಮರಗಳಿಗೆ ಅಳವಡಿಸಲಿಲ್ಲ. ಬಹುಶಃ ಹಿಂದೆ ಇದ್ದಂಥ ಕೃಷಿ ಸಚಿವರೂ ಕೂಡ ಇದೇ ರೀತಿ ಮಾಡಿದ್ದಾರೆ. ಬೇವಿನ ಹಿಂಡಿ ಮತ್ತು ಬೇವಿನ ಎಣ್ಣೆಯನ್ನು ತೆಂಗಿನ ಮರದ ಬೇರಿನ ಸುತ್ತಲೂ ಹಾಕಿ ಒಳ್ಳೆಯ ಗೊಬ್ಬರ ಮತ್ತು ನೀರನ್ನು ಸರಿಯಾದ ರೀತಿಯಲ್ಲಿ ಕೊಟ್ಟರೆ ಕ್ರಮೇಣ ನುಸಿಪೀಡೆ ಕಡಿಮೆಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಬೇವಿನ ಹಿಂಡಿ ಮತ್ತು ಬೇವಿನ ಎಣ್ಣೆ ಹಾಕುವ ಪದ್ಧತಿ ಬಗ್ಗೆ ನನಗೆ ಗೊತ್ತಿದೆ ಸ್ವಾಮಿ. ಬೇವಿನ ಎಣ್ಣೆ ತೆಗೆಯದಿರುವ ಬೇವಿನ ಹಿಂಡಿಗೆ ದನದ ಗೊಬ್ಬರ ಹಾಕಿ ಹಾಕಬೇಕು ಎನ್ನುವುದು ನನಗೆ ಗೊತ್ತು. ಆದರೆ ಇಂದು ಬೇವಿನ ಹಿಂಡಿ ಬೆಲೆ ಎಷ್ಟು? ಯಾರು ತರುವವರು? ಯಾರು ಇದನ್ನು ಕೊಡುತ್ತಾರೆ?

ಶ್ರೀ ಅಲಂಗೂರು ಆರ್. ಶ್ರೀನಿವಾಸ್: ಯಾರು ತರುವವರು ಎಂದರೆ ಏನು? ಅದನ್ನು ರೈತನೇ ತರಬೇಕು. ಒಂದು ಬಾರಿ....

ಅಧ್ಯಕ್ಷರು: ಚರ್ಚೆ ಸಾಕು. ಈಗ ಸಂಬಂಧಪಟ್ಟ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ. ನಾನು ಸ್ವತಃ ನನ್ನ ತೋಟದಲ್ಲಿ ಮಾಡಿದಂಥ ಪ್ರಯೋಗದ ಬಗ್ಗೆ ಹೇಳುತ್ತೇನೆ. ಸ್ವಲ್ಪ ಜನಗಳಿಗೂ ಈ ಪ್ರಯೋಗದ ಬಗ್ಗೆ ಗೊತ್ತಾಗಲಿ. ವಾಟಾಳ್ ನಾಗರಾಜ್‌ರವರು ಪಾಪ ರೈತರ ಬಗ್ಗೆ ಚೆನ್ನಾಗಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು: ಇನ್ನೂ ಬಿಲ್‌ಗಳು ಉಳಿದಿವೆ. ಆಮೇಲೆ ಉತ್ತರವನ್ನೂ ಕೂಡ ಕೊಡಬೇಕಾಗಿದೆ. ಇದಲ್ಲದೇ ಇನ್ನೂ ಬಹಳ ವಿಷಯಗಳಿವೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ನಾನು ಐದು ನಿಮಿಷದ ಮೇಲೆ ಮಾತನಾಡುವುದಿಲ್ಲ. ಬೇಕಾದರೆ ನೀವು ಟೈಂ ನೋಡಿಕೊಳ್ಳಿ.

ಅಧ್ಯಕ್ಷರು:ಆಯಿತು. ಬೇಗ ಮುಗಿಸಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ನನ್ನ ತೋಟದಲ್ಲಿಯೂ ಕೂಡ ಎರಡು ಸಾವಿರ ತೆಂಗಿನ ಗಿಡಗಳಿವೆ. ಪ್ರತಿ ವರ್ಷ ನಾನು ಐದೈದು ಕೆ.ಜಿ. ಒಂದೊಂದು ಗಿಡಕ್ಕೆ ಬೇವಿನ ಹಿಂಡಿಯನ್ನು ಹಾಕುತ್ತಿದ್ದೇನೆ. ಅದನ್ನು ಹಾಕುತ್ತಿರುವುದರಿಂದ ಸ್ವಲ್ಪ ನುಸಿ ಪೀಡೆ ಕಡಿಮೆಯಾಗಿದೆ. ಹೋದ ಸಾರಿ ಪೂರಾ ಕಡಿಮೆಯಾಗಿತ್ತು. ಅದರ ಹಿಂದಿನ ವರ್ಷ ಮಳೆಯೂ ಕೂಡ ಚೆನ್ನಾಗಿ ಆಗಿತ್ತು. ಬೇವಿನ ಹಿಂಡಿ ಮತ್ತು ನೀರನ್ನು ಸರಿಯಾಗಿ ಕೊಟ್ಟರೆ ನುಸಿಪೀಡೆ ಕಂಟ್ರೋಲ್‌ಗೆ ಬರುತ್ತದೆ. ಆಮೇಲೆ ಇವರು ಆ ಗರಿಗಳಿಗೆ ಬರುವಂಥ ಸುಟ್ಟುಹೋಗುವಂತೆ ಆಗುವ ರೋಗದ ಬಗ್ಗೆ ಹೇಳಿದ್ದಾರೆ. ಅದನ್ನು

ನಿಯಂತ್ರಿಸಲು ಮಾನೋಕ್ರೋಟೊಪಸ್ ಅನ್ನು ಬೇರಿಗೆ ಕಟ್ಟಿದರೆ ಅದೂ ಕೂಡ ಹೋಗುತ್ತದೆ. ಮಂತ್ರಿಗಳು ಉತ್ತರವನ್ನು ಏನು ಕೊಡುತ್ತಾರೋ ನನಗೆ ಗೊತ್ತಿಲ್ಲ. ಆದರೆ ನನ್ನ ತೋಟದಲ್ಲಿ ಸ್ವತಃ ನಾನು ಮಾಡಿದಂಥ ಕ್ರಿಯೆ ಇದಾಗಿದೆ. ಆದರೆ ಬೇವಿನ ಹಿಂಡಿಯನ್ನು ಸರ್ಕಾರ ಕೊಡುತ್ತದೆಯೇ ಎನ್ನುವ ರೀತಿಯಲ್ಲಿ ವಾಟಾಳ್ ನಾಗರಾಜ್‌ರವರು ಕೇಳಿದರೆ ಅದಕ್ಕೆ ಸರ್ಕಾರ ಹೇಳಬೇಕು. ಆದರೆ ರೈತರಾದವರು ಬೇವಿನ ಹಿಂಡಿಯನ್ನು ತರುವ ಕೆಲಸವನ್ನು ಅವರೇ ಮಾಡಬೇಕಾಗುತ್ತದೆ.

ಶ್ರೀ ಅಲಂಗೂರು ಆರ್. ಶ್ರೀನಿವಾಸ್: ಬೇವಿನ ಹಿಂಡಿಗೂ ಸರ್ಕಾರ ಶೇಕಡ 50 ರಷ್ಟು ಸಬ್ಸಿಡಿಯನ್ನು ಕೊಡುತ್ತಿದೆಯಲ್ಲ. ಆಗ್ರೋಗೋಲ್ಡ್‌ಗೆ ಕೊಡುತ್ತಿದ್ದೇವೆ, ವರ್ಮಿಮಿಲ್‌ನದಕ್ಕೆ ಕೊಡುತ್ತಿದ್ದೇವೆ. ಇದಕ್ಕೆಲ್ಲಾ 50% ಸಬ್ಸಿಡಿ.

ಶ್ರೀ ಕೆ. ಶ್ರೀನಿವಾಸಗೌಡ: ಬೇವಿನ ಹಿಂಡಿಯಲ್ಲಿ ಎಣ್ಣೆ ತೆಗೆದು ಬರೇ ಹಿಂಡಿ ಹಾಕಿದರೆ ನುಸಿಪೀಡೆ ಕಡಿಮೆಯಾಗುವುದಿಲ್ಲ. ಬಿಜಾಪುರದಲ್ಲಿ ಆಯಿಲ್ ಸಮೇತ ಪುಡಿ ಮಾಡಿಕೊಡುವಂಥ ಮೆಶಿನ್‌ಗಳಿವೆ. ಅದನ್ನು ತಂದು ಹಾಕಿದರೆ ಮಾತ್ರ ಕಂಟ್ರೋಲ್ ಆಗುತ್ತದೆ. ಆದರೆ ಇಲ್ಲಿ ಬೆಂಗಳೂರು, ಮೈಸೂರು, ಕೋಲಾರದಲ್ಲಿ ಮಾರುವಂಥ ಬೇವಿನ ಹಿಂಡಿಯಲ್ಲಿ ನುಸಿಪೀಡೆ ರೋಗ ಹೋಗುವುದಿಲ್ಲ. ಈ ವಿಷಯವನ್ನು ಕೂಡ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ನಾನೊಂದು ಸಲಹೆಯನ್ನು ಕೊಡಬಯಸುತ್ತೇನೆ. ಈ ನುಸಿರೋಗಕ್ಕೆ There is no specific treatment. ಇದು ಒಂದು viral infection. ಮೆಕ್ಸಿಕೋದಿಂದ ಪ್ರಾರಂಭವಾಗಿ ಶ್ರೀಲಂಕಾದಿಂದ ಚೆನ್ನೈ ಮುಖಾಂತರ ಭಾರತ ದೇಶಕ್ಕೆ ಬಂತು. ಮನುಷ್ಯನಿಗೆ ಏನು ವೈರಲ್ ಜ್ವರ ಬಂದರೆ ಅದಕ್ಕೆ specific treatment ಇಲ್ಲವೋ ಅದೇ ರೀತಿಯಲ್ಲಿ ನುಸಿ ರೋಗಕ್ಕೆ specific treatment ಇಲ್ಲ. ಅದಕ್ಕೆ ಬೇವಿನ ಹಿಂಡಿ ಹಾಕಬೇಕೆಂದರೆ ಅದಕ್ಕೆ ನ್ಯೂಟ್ರಿಶಿಯನ್ ಕೊಡಬೇಕು. ಮಾನೋಕ್ರೊಟೋಪಸ್ ಅನ್ನು ನೀವು ರೂಟ್‌ಗೆ ಇಂಜಕ್ಟ್ ಮಾಡಿದರೆ ಅದು ಫಾಸ್ಪರಸ್ ಪಾಯಿಸನ್ ಆಗಿ, ಅಲ್ಲಿರತಕ್ಕಂಥ ತೆಂಗು ಅಥವಾ ಎಳನೀರನ್ನು ಕುಡಿದರೆ ಕಿಡ್ನಿ ಫೇಲ್ಯೂರ್ ಆಗಿ ಮನುಷ್ಯರು ಸಾಯುವ ಸಾಧ್ಯತೆಗಳು ಹೆಚ್ಚು. ಇವರು ಏನು ಮಾಡಬೇಕೆಂದರೆ ತನ್ನಷ್ಟಕ್ಕೇ ತಾನೇ incubation ಮುಖಾಂತರ ಸೆಟ್ಲ್ ಆಗುವುದಕ್ಕೆ ಐದರಿಂದ ಹತ್ತ ವರ್ಷ ಬೇಕಾಗುತ್ತದೆ. ನೀವೇನೇ ಟ್ರೀಟ್‌ಮೆಂಟ್ ಮಾಡಿದರೂ ಕೂಡ ಇಷ್ಟು ಕಾಲ ಬೇಕಾಗುತ್ತದೆ. ಅದಕ್ಕೋಸ್ಕರ ಸರ್ಕಾರ

perennial cropಗೆ ಎನ್‌ಕರೇಜ್ ಮಾಡಬೇಕು. ಇವತ್ತು ಶಾರ್ಟ್ ಟರ್ಮ್ ಲೋನ್ ಅನ್ನು ಲಾಂಗ್ ಟರ್ಮ್ ಲೋನ್‌ನನ್ನಾಗಿ ಇಂಟರೆಸ್ಟ್ ಫ್ರೀ ಲೋನ್ ಕೊಟ್ಟು ರೈತರು ಈ ಸಂಕಷ್ಟ ಪರಿಸ್ಥಿತಿಯಿಂದ ಪಾರಾಗಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ನುಸಿಪೀಡೆ ನಿವಾರಣೆಯನ್ನು ಇವರು ಮಾಡಲಿಲ್ಲ. ಹಿಂದಿನ ಸರ್ಕಾರ ಇದ್ದಾಗ ಕೋಟ್ಯಾಂತರ ರೂಪಾಯಿಗಳ ಹಣವನ್ನು ತೆಗೆದುಕೊಂಡು ನಿವಾರಣೆ ಮಾಡುತ್ತೇವೆಂದು ಹೇಳಿ ನಮ್ಮ ಹೆಸರಲ್ಲಿ ಖರ್ಚು ಹಾಕಿದ್ದಾಯಿತು. ಇವತ್ತಿಗೂ ಅದು ಸೈಕಲ್ ತರಹ ಸಾರ್, ಹತ್ತು ದಿವಸ ಹನ್ನೆರಡು ದಿವಸಕ್ಕೆ ರೀ–ಪ್ರೊಡಕ್ಷನ್ ಆಗುವುದರಿಂದ ಆ ಪೆಸ್ಟ್ ನುಸಿಯನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ನಾವು ಎರಡೇ ಎರಡು ಕೇಳುವುದು, ಒಂದು ನಾನು ಆವತ್ತು ಯಡಿಯೂರಪ್ಪನವರನ್ನು ಕೇಳಿದೆ, ಏನಾದರೂ ನೀರಾ ತೆಗೆದು ಸೇಂಧಿ–ಗೀಂಧಿ ಮಾಡುವುದಕ್ಕೆ ಬಿಟ್ಟರೆ ನಾವು ಬದುಕಿಕೊಳ್ಳುತ್ತೇವೆ. ಇಲ್ಲಾ, ಎರಡನೇಯದೇನೆಂದರೆ, ಇವತ್ತು ಈ ಕಡೆ ಕೊಬ್ಬರಿ ಮಾರ್ಕೆಟ್ ಬಿದ್ದುಹೋಗಿದೆ. ಇನ್ನೊಂದು ಕಡೆ ತೆಂಗಿನಕಾಯಿ ಬರುತ್ತಿಲ್ಲ. ಅದಕ್ಕೆ ನುಸಿ ಆಗಿದೆ. ಕಬ್ಬು ಬೆಳೆಗಾರರಿಗೆ ಕೊಟ್ಟಂತೆ ನಮಗೂ ಒಂದು ಗಿಡಕ್ಕೆ ಇಷ್ಟು ಅಥವಾ ಒಂದು ಎಕರೆಗೆ ಇಷ್ಟು ಎಂದು ಪರಿಹಾರವನ್ನಾದರೂ ಕೊಡಿಸಬೇಕು. ಇದನ್ನು ಬಿಟ್ಟರೆ ಬೇರೇನೂ ನಾವು ಮಾಡುವುದಕ್ಕಾಗುವುದಿಲ್ಲ. ನಾವು ಗಿಡ ಉಳಿಸಿಕೊಳ್ಳುವುದೋ, ಕೊಬ್ಬರಿ ಉಳಿಸಿಕೊಳ್ಳುವುದೋ, ಮಾರ್ಕೆಟ್ ನೋಡುವುದೋ, ಹೇಳಿ. ಇಂಥ ಕೆಟ್ಟ ಸ್ಥಿತಿಯಲ್ಲಿ ತೆಂಗು ಬೆಳೆ ರೈತರುಗಳು ನಾವು ಸಿಕ್ಕಿಹಾಕಿಕೊಂಡಿದ್ದೇವೆ. ನೀವು ಮುಂದೆ ಬರಬೇಕು, ಮಾನ್ಯ ಮಂತ್ರಿಗಳು ಕನಿಷ್ಟ Coconut Development Board ನ ಸಂಪರ್ಕ ಇಟ್ಟುಕೊಂಡು ಅಲ್ಲಿಂದ ದುಡ್ಡು ತರುವಂತಹ ಕೆಲಸವಾಗಲಿಲ್ಲ. ಇಡೀ ದುಡ್ಡು ಕೇರಳದಲ್ಲಿ ಖರ್ಚಾಗುತ್ತಿದೆ. Re-plantation subsidy ಎಂದು ಹೇಳಿ ಒಂದು ಗಿಡಕ್ಕೆ ನೂರು ರೂಪಾಯಿ ಸುಮ್ಮನೆ subsidy ಕೊಡುತ್ತಿದ್ದಾರೆ. ಅದರ ಬಗ್ಗೆ ನೀವು ಏನಾದರೂ ಮಾಡಿ, ಸ್ವಲ್ಪ ಚುರುಕಾಗಿ ಓಡಾಡಿ. ಒಂದು University ಮಾಡಿದರೆ ಆಗುತ್ತದಾ? ಮರಗಳು ಸತ್ತು ಹೋಗುತ್ತವೆ, ನಾಲ್ಕು ಕೋಟಿ ತೆಂಗಿನ ಮರಗಳು ಇರುವಂತಹ ಈ ರಾಜ್ಯದಲ್ಲಿ ಇವತ್ತು ನಿರ್ನಾಮವಾಗುತ್ತಿದೆ. ಇವತ್ತು ಬೇಡಿಕೆ ಇಲ್ಲ, ನಾವು ತಿಪಟೂರು ಭಾಗದವರು ಒಳ್ಳೆಯ ಕೊಬ್ಬರಿ ತರುವುದಕ್ಕೆ ಆಗುತ್ತಿಲ್ಲ. ತಕ್ಷಣ action ತೆಗೆದುಕೊಳ್ಳಬೇಕು. ಇದರ ನವಾರಣೆಗೆ ಏನಾದರೂ ಕ್ರಮ ಕೈಗೊಳ್ಳುವುದಾದರೆ ನೀವು ರೈತರಿಗೆ ಹಣ ಕೊಡುವಂತಹ ಸ್ಥಿತಿಯನ್ನು ತರಬೇಕು.

ಶ್ರೀ ಜಿ.ಸಿಂಧೂರ ರಾಜಶೇಖರ(ಶಿಗ್ಗಾಂವ್): ಮಾನ್ಯ ಅಧ್ಯಕ್ಷರೆ, ನಾನು ನುಸಿಪೀಡೆಯನ್ನು control ಮಾಡುವಂತಹ ರೈತನದ್ದೇನೆ, ಅದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಶ್ರೀನಿವಾಸ ಗೌಡರು ಹೇಳಿದ ಹಾಗೆ ಮಾರ್ಕೆಟ್‌ನಲ್ಲಿ ಸಿಗುವಂತಹ ಬೇವಿನ ಹಿಂಡಿಯಲ್ಲಿ ಎಣ್ಣೆಯನ್ನು ತೆಗೆದಿರುತ್ತದೆ. ಬೇವಿನ ಹಿಂಡಿಯನ್ನು ಎಣ್ಣೆ ತೆಗೆಯದೇ ಗಿಡಕ್ಕೆ ಹಾಕಬೇಕು. ಅದರ ಜೊತೆಗೆ ಬೇವಿನ ಸೊಪ್ಪನ್ನು ಬಿಸಿ ನೀರಿನಲ್ಲಿ ಹಾಕಿ ಅದನ್ನು spray ಮಾಡಬೇಕು. ಆದುದರಿಂದ ಹೆಚ್ಚಿನ ಬೇವಿನ ಮರವನ್ನು ಬೆಳೆಸುವುದಕ್ಕೆ ಆದ್ಯತೆಯನ್ನು ಕೊಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ನೀವು ಬೇವಿನ ಮರವನ್ನು ಬೆಳೆಸುವವರೆಗೆ ತೆಂಗಿನ ಮರದ ಗತಿಯೇನು?

ಶ್ರೀ ಸಿಂಧೂರ ರಾಜಶೇಖರ: ಬೇವಿನ ಹಿಂಡಿ ಬೇಕೆಂದರೆ ಬೇವಿನ ಮರವೇ ಇಲ್ಲ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ: ಮಾನ್ಯ ಅಧ್ಯಕ್ಷರೆ, ನುಸಿ ರೋಗವನ್ನು ಹತೋಟಿಗೆ ತರುವಂತಹ ವಿಚಾರದಲ್ಲಿ ಬಹಳಷ್ಟು ತೊಂದರೆ ಇದೆ. ಅದಕ್ಕೆ ಕಾರಣ ಇಷ್ಟೇ, ಏಕಕಾಲದಲ್ಲಿ ಎಲ್ಲಾ ರೈತರು ಔಷಧಿ ಸಿಂಪರಣೆ ಮಾಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ಆ ಹಿನ್ನೆಲೆಯಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಬ್ಬು ಬೆಳೆಯುವಂತಹ ರೈತರು ಇದ್ದು, ಕಬ್ಬಿಗೆ ಬಿಳಿ ಉಣ್ಣೆ ರೋಗ ಬಂದಾಗ ಅದಕ್ಕೆ ಪರಭಕ್ಷ ಕೀಟ ಬಿಟ್ಟಾಗ ಕ್ರಮೇಣವಾಗಿ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಬರುಬರುತ್ತಾ 75% ಕಡಿಮೆಯಾಗಿದೆ. ಈಗ ಮಳೆಗಾಲ ಹೆಚ್ಚಾಗುತ್ತಿರುವುದರಿಂದ ತೆಂಗಿನ ಮರದಲ್ಲಿ ಕೂಡ ನುಸಿ ರೋಗ ಕಡಿಮೆಯಾಗುತ್ತಿದೆ. ಅದರ ಜೊತೆಗೆ ನಾವು ತೆಂಗು ಅಭಿವೃದ್ಧಿ ಮಂಡಲಿಯಿಂದ ಪ್ರತಿವರ್ಷ 17,500 ರೂಪಾಯಿ, ನೀರು ಸಂರಕ್ಷಣೆಗೆ 450 ರೂಪಾಯಿ, ಗೊಬ್ಬರಕ್ಕೆ 11,124 ರೂಪಾಯಿ, ಔಷಧಿಗೆ 4,655 ರೂಪಾಯಿ, cover product ಗೆ 75 ರೂಪಾಯಿ, ಮಿಶ್ರಬೆಳೆಗೆ 1,045 ರೂಪಾಯಿ ಹಾಗೂ ಇನ್ನು ಬೇರೆ ಎಲ್ಲಾ ಸೇರಿ ಪ್ರತಿವರ್ಷ 1,155 ಯಂತೆ ಎರಡು ವರ್ಷ ಕೊಡುವುದರಿಂದ, ಅದೂ ಸಹ ಇತ್ತೀಚೆಗೆ control ಆಗಿದೆ. ಅದಕ್ಕೆ ಜಾಸ್ತಿ ನೀರು ಕೊಟ್ಟರೆ ಮಾತ್ರ ಸರಿಯಾಗುವುದಕ್ಕೆ ಸಾಧ್ಯವಿದೆ. ಈಗಾಗಲೇ ಎಷ್ಟು ಬೆಳೆ ಹಾನಿಯಾಗಿದೆ ಎಂದು ತಮಗೆ ಉತ್ತರವನ್ನು ಕೊಟ್ಟಿದೆ. ಆ ಉತ್ತರ ಸರಿ ಇಲ್ಲವೆನ್ನಿಸಿದರೆ ನಾನು ಅದನ್ನು ಹೋಬಳಿವಾರು ಎಲ್ಲವನ್ನು ಪರಿಶೀಲನೆ ಮಾಡಿ ಎಷ್ಟು ಹಾನಿಯಾಗಿದೆ ಎಂದು

ನೋಡಿ ಹೇಳುತ್ತೇನೆ. ಇನ್ನು ಪರಿಹಾರದ ಬದಲಾಗಿ ಸಬ್ಸಿಡಿ ಹಣವಾಗಿ ಕೊಡುತ್ತಿದ್ದೇವೆ. ತಾವು ಹೇಳಿದಂತಹ ವಿಚಾರದಲ್ಲಿ ಸರಿಯಾದಂತಹ ವ್ಯವಸ್ಥೆಯನ್ನು ಮಾಡುವಂತಹ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಅದರ ಬಗ್ಗೆ ಆಲೋಚನೆಯನ್ನು ಮಾಡುತ್ತೇವೆ.

ಅಧ್ಯಕ್ಷರು: ಈಗ Chief Minister ನಿಂದ ಉತ್ತರವನ್ನು ಕೊಡಿಸಿ ಬಿಡೋಣ. ಪಡಿತರ ಚೀಟಿಗೆ ಸಂಬಂಧಪಟ್ಟ ಹಾಗೆ ಮಲ್ಲಿಕಾರ್ಜುನ ಎಸ್. ಅಕ್ಕಿಯವರು ಕೊಟ್ಟಿದ್ದಾರೆ, ಹೇಳಿ.

(ಆ) ಪಡಿತರ ಚೀಟಿಗೆ ಸಂಬಂಧಪಟ್ಟ ಹಾಗೆ.

ಶ್ರೀ ಮಲ್ಲಿಕಾರ್ಜುನ ಎಸ್. ಅಕ್ಕಿ(ಕುಂದಗೋಳ): ಮಾನ್ಯ ಅಧ್ಯಕ್ಷರೆ, ಪಡಿತರ ಚೀಟಿ ಬಗ್ಗೆ ಹಲವಾರು ಬಾರಿ ಹಿರಿಯರು ಈ ಸದನದಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ನಾನು ಹೋದ ಬಾರಿ ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ನೀವು ಅದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಪಡಿತರ ಚೀಟಿ ಬಗ್ಗೆ ಹಲವಾರು ಬಾರಿ ಚರ್ಚೆಯನ್ನು ಮಾಡಿದ್ದೇವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಪಡಿತರ ಚೀಟಿ ವ್ಯವಸ್ಥೆ ಸರಿಯಾಗಿ ಆಗಿಲ್ಲ. ಇವತ್ತು ನಾವು ಯಾವುದೇ ಒಂದು ಹಳ್ಳಿಗೆ ಸಭೆಗೆ ಹೋದರೆ ಅಲ್ಲಿರುವಂತಹ ಬಡವರು ಬಂದು ಪಡಿತರ ಚೀಟಿ ಬಗ್ಗೆ ಈಗಲೂ ಕೂಡ ಒತ್ತಾಯವನ್ನು ಮಾಡುತ್ತಿದ್ದಾರೆ. ಇವತ್ತು APL card ಮತ್ತು BPL card ಗಳನ್ನು ಯಾರಿಗೆ ಕೊಡಬೇಕು ಎನ್ನುವುದರ ಬಗ್ಗೆ ಒಂದು ಸಂಘವನ್ನು ಮಾಡಿದ್ದರು. ಇವತ್ತು ಸರಿಯಾಗಿ ಯಾದಿ/ಸರ್ವೇ ಮಾಡದೇ ಯಾರಿಗೆ BPL card ಕೊಡಬೇಕು ಅವರಿಗೆ APL card ಕೊಟ್ಟಿದ್ದಾರೆ. ಯಾರಿಗೆ ಅನ್ನಪೂರ್ಣ ಕಾರ್ಡ್‌ಗಳು ಹಾಗೂ ಅಂತ್ಯೋದಯ ಕಾರ್ಡುಗಳನ್ನು ಕೊಡಬೇಕು, ಅವರಿಗೆ ಕೊಡದೇ, ಯಾರಿಗೆ ಇವತ್ತು ಐದಾರು ಏಕರೆ ಜಮೀನು ಇದೆ, ಅವರಿಗೆ ಅಂತ್ಯೋದಯ ಕಾರ್ಡುಗಳನ್ನು ಕೊಡುವಂತಹ ಕೆಲಸವನ್ನು ಸೆಕ್ರೆಟರಿಗಳು ಮಾಡಿದ್ದಾರೆ. ನಾನು ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಈ ಸಮಸ್ಯೆ ಬಗೆಹರಿಯಬೇಕಾದರೆ ಎಲ್ಲಾ ಜಿಲ್ಲೆಯ ಶಾಸಕರುಗಳನ್ನು ಕರೆದು ತಮ್ಮ ತಮ್ಮ ಕ್ಷೇತ್ರದಲ್ಲಿ ಯಾವ ರೀತಿಯಾಗಿ ಪಡಿತರ ಚೀಟಿ ವಿತರಣೆಯಾಗುತ್ತಿದೆ ಎನ್ನುವುದರ ಬಗ್ಗೆ ಒಂದು ಸಭೆಯನ್ನು ಮಾಡಬೇಕು. ಪಡಿತರ ಚೀಟಿಯ ಬಗ್ಗೆ ಹಲವಾರು ಮಾನ್ಯ ಸದಸ್ಯರುಗಳು ಮಾತನಾಡಿದರೂ ಕೂಡ ಅದರ ಸಮಸ್ಯೆ